(ಇಂದು ದಿನಾಂಕ 06/04/2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ವಕೀಲರಾದ ಶ್ರೀ ಆರ್.ಆರ.ಎಚ್. ವಕೀಲರಿಂದ.**

ನಾನು ಪೊಲೀಸ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತನಾಗಿದ್ದೇನೆ. ನಮ್ಮ ಊರು ಶಿರಸಿ. ನನಗೆ ನ್ಯಾಯಾಲಯಕ್ಕೆ ಹಾಜರಾಗಲು ಸಮನ್ಸ ಬಂದಿರುವದಿಲ್ಲ . ನಾನು 2 ನೇ ವಾದಿಯ ಕೋರಿಕೆಯ ಮೇರೆಗೆ ಸಾಕ್ಷಿ ಹೇಳಲು ಬಂದಿದ್ದೇನೆ. ಮಂಜುನಾಥ ಗಣಪಯ್ಯ ಹೆಗಡೆ ಇವರ ಪರಿಚಯ 1992 ರಿಂದ 1998 ರವರೆಗೆ ಇತ್ತು. ನಾನು ಪೊಲೀಸ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾಗ ಅವರ ಮನೆ ನಾನು ಕೆಲಸ ಮಾಡುವ ಬೀಟ್ ವ್ಯಾಪ್ತಿಯಲ್ಲಿ ಬರುತ್ತಿತ್ತು. ನಾನು 2012 ರಲ್ಲಿ ನಿವೃತ್ತನಾಗಿದ್ದೇನೆ. ಮಂಜುನಾಥ ಗಣಪಯ್ಯ ಹೆಗಡೆ ಇವರಿಗೆ 4 ಜನ ಗಂಡು ಹಾಗೂ 4 ಜನ ಹೆಣ್ಣುಮಕ್ಕಳು. ಅವರೆಲ್ಲರೂ ಪ್ರತ್ಯೇಕವಾಗಿ ವಾಸವಾಗಿದ್ದಾರೆ. 1 ನೇ ವಾದಿ ಆರೋಗ್ಯವಾಗಿದ್ದಾರೆ. ನಾನು ಅವರನ್ನು ಎರಡು ಮೂರು ವರ್ಷಗಳ ಹಿಂದೆ ನೋಡಿದ್ದೇನೆ. 2 ನೇ ವಾದಿಯ ಪರಿಚಯ ಇದೆ. ಅವರು ಪೇಟೇಸರದಲ್ಲಿ ಅವರ ತಂದೆಯ ಜೊತೆಗೆ ವಾಸವಾಗಿದ್ದರು.. ಮಂಜುನಾಥ ಗಣಪಯ್ಯ ಹೆಗಡೆ ಮತ್ತು ಅವರ ಮಕ್ಕಳ ಮಧ್ಯದಲ್ಲಿ ವಿಭಾಗವಾದ ಬಗ್ಗೆ ನನಗೆ ಮಾಹಿತಿ ಇರುವದಿಲ್ಲ . ನಾನು ಕೆಲಸ ಮಾಡುವ ಬೀಟ್ ವ್ಯಾಪ್ತಿಯೊಳಗೆ ಅಂದಾಜು 170 ಮನೆಗಳು ಬರುತ್ತಿದ್ದವು. ಸದರಿ ಮನೆಗಳು ಯಾರಿಗೆ ಸೇರಿದ್ದು ಎಂದು ನನಗೆ ಹೇಳಲು ಬರುವದಿಲ್ಲ.

ಮಂಜುನಾಥ ಗಣಪಯ್ಯ ಹೆಗಡೆ ಇವರು ನಾನು ಕೆಲಸ ಮಾಡುವಾಗ ನನ್ನನ್ನು ಹಚ್ಚಿಕೊಂಡಿದ್ದರು ಆದ್ದರಿಂದ ನನಗೆ ಪರಿಚಯ. ಹೆಣ್ಣುಮಕ್ಕಳನ್ನು ಹೊನ್ನಾವರ ತಾಲೂಕು ಗೇರಸೊಪ್ಪಾದಲ್ಲಿ ಒಬ್ಬ ಮಗಳನ್ನು ಮದುವೆ ಮಾಡಿ ಕೊಟ್ಟಿದ್ದಾರೆ ಅವಳ ಹೆಸರು ನನಗೆ ಗೊತ್ತಿಲ್ಲ. ಇನ್ನೊಬ್ಬ ಮಗಳನ್ನು ಹೊನ್ನಾವರ ತಾಲೂಕು ಮಾಗೋಡ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಮತ್ತೊಬ್ಬ ಮಗಳನ್ನು ರೇವಣಕಟ್ಟಾ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಮತ್ತೊಬ್ಬರನ್ನು ಶಿ ತಾಲೂಕು ಎಕ್ಕಂಬಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ ಅವರ ಹೆಸರು ನನಗೆ ಗೊತ್ತಿಲ್ಲ. ನಾಲ್ಕು ಜನ ಗಂಡು ಮಕ್ಕಳಲ್ಲಿ ಮೊದಲನೇಯವರು ಶ್ರೀಧರ ಹೆಗಡೆ . ಎರಡನೇಯವರು ಪದ್ಮನಾಭ, ವೆಂಕಟಗಿರಿ ಮಂಜುನಾಥ ಹೆಗಡೆ ಹಾಗೂ ಕೃಷ್ಣಮೂರ್ತಿ ಹೆಗಡೆ. ಎರಡನೇ ವಾದಿ ಏನು ಉದ್ಯೋಗ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ . ಡಿಸೆಂಬರ 2019 ರಲ್ಲಿ ಮಂಜುನಾಥ ಗಣಪಯ್ಯ ಹೆಗಡೆ ಮೃತಪಟ್ಟಿದ್ದಾರೆ . ಅವರಿಗೆ ವಯಸ್ಸಾಗಿದ್ದರಿಂದ ಮೃತಪಟ್ಟಿದ್ದಾರೆ. ಅವರು ಎಲ್ಲಿ ಚಿಕಿತ್ಸೆ ಪಡೆಯುತ್ತಿದರು ಎಂದು ನನಗೆ ಗೊತ್ತಿಲ್ಲ. ಕೃಷ್ಣಮೂರ್ತಿ ಚಿಕಿತ್ಸೆ ಕರೆದುಕೊಂಡು ಹೋಗುತ್ತಿದ್ದಾನೆಂದು ಮಂಜುನಾಥ ಗಣಪಯ್ಯ ಹೆಗಡೆಯವರು ನನಗೆ ಹೇಳಿದ್ದರು . ದಿನಾಂಕಃ 29/06/2019 ರಂದು ಮಂಜುನಾಥ ಗಣಪಯ್ಯ ಹೆಗಡೆಯವರನ್ನು ಕೊನೆಯದಾಗಿ ಬೇಟಿಯಾಗಿದ್ದೆನು. ನಾನು ಅವರ ಮನೆಗೆ ಹೋಗಿದ್ದೆನು. ದಿನಾಂಕಃ 29/06/2019 ರಂದು ಮಂಜುನಾಥ

ಗಣಪಯ್ಯ ಹೆಗಡೆಯವರು ಹುಬ್ಬಳ್ಳಿಯ ಆಸ್ಪತ್ರೆಗೆ ದಾಖಲಾಗಿದ್ದರು ಎನ್ನುವದು ನನಗೆ ಗೊತ್ತಿಲ್ಲ. ಜೂನ 2019 ರಿಂದ 4 ತಿಂಗಳ ಹಿಂದಿನಿಂದಲೂ ಚಿಕಿತ್ಸೆಪಡೆಯುತ್ತಿರಬಹುದು.. 31/05/2019 ರಂದು ಬೆಳಿಗ್ಗೆ 8.00 ಗಂಟೆಗೆ ಮಂಜುನಾಥ ಗಣಪಯ್ಯ ಹೆಗಡೆಯವರು ನನಗೆ ಫೋನ ಮೂಲಕ ವಿಲ್‌ನಾಮೆ ಮಾಡುವದಿದೆ ಎಂದು ಹೇಳಿದ್ದರು. ನನ್ನ ಫೋನ ನಂಬರ ನೆನಪಿರುವದಿಲ್ಲ. ಮಂಜುನಾಥ ಗಣಪಯ್ಯ ಹೆಗಡೆಯವರ ಫೋನ ನಂಬರು ಸಹ ನನಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಣಪತ್ರದಲ್ಲಿ ದಿನಾಂಕಃ 31/05/2019 ರಂದು ಬೆಳಿಗ್ಗೆ 8.00 ಬರಬೇಕೆಂದು ಹೇಳಿದ್ದರು ಎಂದು ಹೇಳಿ ಬರೆಸಿರುವದಿಲ್ಲ. ಆ ದಿನ ಯಾವ ವಾರ ಆಗಿತ್ತು ಎಂದು ನನಗೆ ನೆನಪಿರುವದಿಲ್ಲ. ನಾನು ಫೋನ ಮಾಡಿ ಹೇಳುವ ದಿನ ಎಸ್.ಎಮ್.ಗುಡಿಗಾರ ಎನ್ನುವವರ ಮನೆಯಲ್ಲಿ ಬಾಡಿಗೆಗೆ ಇದ್ದು ಆ ದಿನ ಮನೆಯಲ್ಲಿಯೇ ಇದ್ದೆನು.

ವಸಂತ ಅಣ್ಣಪ್ಪ ಹೆಗಡೆ ಎನ್ನುವವರ ಪರಿಚಯ ಇರುವದಿಲ್ಲ. ನಾನು ಅವರನ್ನು ಅದೇ ದಿನ ನೋಡಿದ್ದೆನು. ವಿಲನಾಮೆ ಬರೆಯಲು ಎಸ್.ಆರ್.ಹೆಗಡೆಯವರ ಕಛೇರಿಗೆ ಹೋಗಿದ್ದೆವು. ಅವರ ಕಛೇರಿ ಹಳೆ ಬಸಸ್ಟ್ಯಾಂಡ ಹತ್ತಿರ ಹೊನ್ನೆಗುಂಡಿ ರಸ್ತೆಯಲ್ಲಿತ್ತು. ಅವರ ಕಛೇರಿ ನೆಲಮಹಡಿಯಲ್ಲಿತ್ತು. ನಾನು 9.45 ಕ್ಕೆ ವಕೀಲರ ಕಛೇರಿಗೆ ಹೋಗಿದ್ದೆನು. ಮಂಜುನಾಥ ಗಣಪಯ್ಯ ಹೆಗಡೆ ನಾನು ಹೋಗುವದಕ್ಕಿಂತ ಮೊದಲೇ ಬಂದಿದ್ದರು. ವಸಂತ ಅಣ್ಣಪ್ಪ ಹೆಗಡೆಯವರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ವಸಂತ

ಅಣ್ಣಪ್ಪ ಹೆಗಡೆಯವರು ಮಂಜುನಾಥ ಗಣಪಯ್ಯ ಹೆಗಡೆಯವರ ಜೊತೆಗೆ ಇದ್ದರು . ನಾನು ಬೆಳಿಗ್ಗೆ 11.30 ಗಂಟೆಯ ಸುಮಾರಿಗೆ ವಿಲ್‌ನಾಮೆಗೆ ಸಹಿ ಮಾಡಿದ್ದೇನೆ. ನಾನು ವಿಲ್‌ನಾಮೆಗೆ ಒಂದು ಸಹಿ ಮಾಡಿದ್ದೇನೆ . ಎಸ್.ಆರ್.ಹೆಗಡೆ ವಕೀಲರು ವಿಲ್‌ನಾಮೆಯನ್ನು ಬರೆದಿದ್ದರು. ವಿಲ್‌ನಾವೆಯಲ್ಲಿ ಯಾವ ಯಾವ ಸರ್ವೆ ನಂಬರಗಳನ್ನು ಹೇಳಿ ಬರೆಸಿದ್ದರು ಎಂದು ನನಗೆ ನೆನಪಿಲ್ಲ . ಎಸ್.ಆರ್.ಹೆಗಡೆ ವಕೀಲರು ಮೊದಲು ವಿಲ್‌ನಾಮೆಯನ್ನು ಮೊದಲು ಕಚ್ಚಾ ಬರೆದಿದ್ದರು. ನಂತರ ವಕೀಲರೇ ಟೈಪ ಮಾಡಿಸಲು ಕೊಟ್ಟು ಬಂದಿದ್ದಾರೆ. ನಿಶಾನೆ ಪಿ.11 ರ ಬಾಂಡ ಪೇಪರನ್ನು ಯಾರು ತಂದಿದ್ದರು ಎಂದು ನನಗೆ ಗೊತ್ತಿಲ್ಲ. ಕಚ್ಚಾ ಬರವಣಿಗೆಗೂ ಹಾಗೂ ಬಾಂಡ ಪೇಪರ ಬರವಣಿಗೆಗೂ ಏನು ವ್ಯತ್ಯಾಸ ಇದೆ ಎಂದು ನನಗೆ ಗೊತ್ತಿಲ್ಲ. ನಿಶಾನೆ ಪಿ.11 ನ್ನು ಟೈಪ ಮಾಡಿದವರ ಹೆಸರು ನನಗೆ ಗೊತ್ತಿಲ್ಲ. ಟೈಪ ಮಾಡಿದವರ ಹೆಸರು ನಮೂದಿಸಿ ಸಹಿ ಹಾಕಿದ ಬಗ್ಗೆ ನನಗೆ ಗೊತ್ತಿಲ್ಲ. ಕಚ್ಚಾ ಬರವಣಿಗೆಯಲ್ಲಿ ನನ್ನ ಹೆಸರು ಮತ್ತು ಇನ್ನೊಬ್ಬ ಸಾಕ್ಷಿದಾರರರಾದ ವಸಂತ ಅಣ್ಣಪ್ಪ ಹೆಗಡೆಯವರ ಹೆಸರನ್ನು ಬರೆದಿದ್ದರು. ನನ್ನ ಮತ್ತು ವಸಂತ ಅಣ್ಣಪ್ಪ ಹೆಗಡೆಯವರ ಹೆಸರು ನಿಶಾನೆ ಪಿ.11 ವಿಲ್‌ನಾಮೆಯಲ್ಲಿ ಟೈಪ ಆಗಿ ಬಂದಿತ್ತು . ಸಾಕ್ಷಿಗೆ ನಿಶಾನೆ ಪಿ .11 ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ನನ್ನ ಮತ್ತು ವಸಂತ ಅಣ್ಣಪ್ಪ ಹೆಗಡೆಯವರ ಹೆಸರು ಮತ್ತು ಸಹಿ ಕೈ ಬರಹದಲ್ಲಿದೆ ಎಂದರೆ ಸರಿ . ದಿನಾಂಕಃ 31/05/2019 ಎಂದು ಕೊನೆಯ ಪುಟದಲ್ಲಿ ಯಾರು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಮಂಜುನಾಥ

ಗಣಪಯ್ಯ ಹೆಗಡೆಯವರು ಕಚ್ಚಾ ಬರವಣಿಗೆ ಮೇಲೆ ಸಹಿ ಮಾಡಿರುವದಿಲ್ಲ . ಕಚ್ಚಾ ಬರವಣಿಗೆಯನ್ನು ವಕೀಲರೇ ತೆಗೆದುಕೊಂಡು ಹೋಗಿದ್ದರು . ನಿಶಾನೆ ಪಿ.11 ಕ್ಕೆ ಎಸ್.ಆರ್.ಹೆಗಡೆ ವಕೀಲರೇ ದಸ್ತೂರ್ ಎಂದು ಸಹಿ ಮಾಡಿದ್ದಾರೆ . ಮಂಜುನಾಥ ಗಣಪಯ್ಯ ಹೆಗಡೆಯವರು ಒಟ್ಟು ಐದು ಸಹಿಗಳನ್ನು ಮಾಡಿದ್ದಾರೆ . ಮರಣ ಶಾಸನ ಬರೆಯಲು ಬಾಂಡ ಪೇಪರನ್ನು ಯಾರು ತಂದಿದ್ದಾರೆಂದು ನನಗೆ ಗೊತ್ತಿಲ್ಲ . ನಾನು ಎಸ್.ಆರ.ಹೆಗಡೆಯವರ ಕಚೇರಿಯಲ್ಲಿ 11.30 ಕ್ಕೆ ಸಹಿ ಮಾಡಿ 12.00 ಗಂಟೆಗೆ ಹೋಗಿದ್ದೇನೆ. ನಾನು, ವಸಂತ ಅಣ್ಣಪ್ಪ ಹೆಗಡೆ ಮತ್ತು ಮಂಜುನಾಥ ಗಣಪಯ್ಯ ಹೆಗಡೆ ಮೂರು ಜನ ಒಟ್ಟಿಗೆ ಹೋಗಿದ್ದೇವೆ. ನಾನು ಎಸ್.ಆರ.ಹೆಗಡೆ ಕಚೇರಿಗೆ ಹೋದಾಗ ಕಂಪ್ಯೂಟರ ಟೈಪಿಂಗ ಮಷೀನ ಅವರ ಕಚೇರಿಯಲ್ಲಿ ಇರಲಿಲ್ಲ. ಎಸ್.ಆರ್.ಹೆಗಡೆ ವಕೀಲರ ಕಚೇರಿಯಲ್ಲಿ ಕಂಪ್ಯೂಟರ ಟೈಪ ಮಷೀನ ಇತ್ತು ಎನ್ನುವದು ಸರಿಯಲ್ಲ . ಮಂಜುನಾಥ ಗಣಪಯ್ಯ ಹೆಗಡೆಯವರು ನೋಟರೀ ರಜಿಸ್ಟರಿಗೆ ಸಹಿ ಮಾಡಿರುವದಿಲ್ಲ . ಎಸ್.ಆರ.ಹೆಗಡೆ ವಕೀಲರು ಮರಣಶಾಸನದ ಪ್ರತಿ ಪುಟಕ್ಕೂ ಸಹಿ ಮಾಡಿದ್ದಾರೆ . ಮರಣ ಶಾಸನದ ಮೂಲ ಪ್ರತಿ ಮಂಜುನಾಥ ಗಣಪಯ್ಯ ಹೆಗಡೆಯವರ ಹತ್ತಿರ ಇತ್ತು. ಅದನ್ನು ಜೆರಾಕ್ಸ ಮಾಡಿಸಿ ನೋಟರೀ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ . ಮಂಜುನಾಥ ಗಣಪಯ್ಯ ಹೆಗಡೆಯವರು ಕಾರಿನಲ್ಲಿ ಬಂದಿದ್ದರು. ಕಾರಿನಲ್ಲಿಯೇ ಮರಳಿ ಹೋಗಿದ್ದಾರೆ. ಅವರನ್ನು ಯಾರು ಕರೆದುಕೊಂಡು ಹೋಗಿದ್ದಾರೆ ಎಂದು ನನಗೆ ನೆನಪಿಲ್ಲ. ಮಂಜುನಾಥ

ಗಣಪಯ್ಯ ಹೆಗಡೆಯವರು ಎಸ್. ಆರ್. ಹೆಗಡೆ ವಕೀಲರಿಗೆ ಪೀಸ ಕೊಟ್ಟ ಬಗ್ಗೆ ನಾನು ನೋಡಿಲ್ಲ. ಎಸ್.ಆರ್.ಹೆಗಡೆ ವಕೀಲರು ದಾಖಲೆ ಮಾಡಿದ ಬಗ್ಗೆ ರಜಿಸ್ಟರನ್ನು ಇಟ್ಟುಕೊಂಡಿದ್ದಾರೆಂದು ನನಗೆ ಗೊತ್ತಿದೆ. ನಿಶಾನೆ ಪಿ.11ರಲ್ಲಿ ಟೈಪ ಮಾಡಿದವರ ಸಹಿ ಕಂಡುಬರುವದಿಲ್ಲ. ವಸಂತ ಅಣ್ಣಪ್ಪ ಹೆಗಡೆ ಎಂದು ಬರೆದಿರುವಲ್ಲಿ ಅವರು ಸಹಿ ಮಾಡಿರುವ ಬಗ್ಗೆ ನನಗೆ ಹೇಳಲು ಆಗುವದಿಲ್ಲ . 2 ನೇ ವಾದಿ ಕೃಷ್ಣಮೂರ್ತಿ ಹೆಗಡೆಯವರು ನನಗೆ ಪರಿಚಯಸ್ಥರಾಗಿರವದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಕೊಟ್ಟಿ ಮರಣಶಾಸನ ನನ್ನ ಸಮಕ್ಷಮ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ.11ರ ಮೇಲೆ ಮಂಜುನಾಥ ಗಣಪಯ್ಯ ಹೆಗಡೆಯವರು ಸಹಿ ಮಡಿರುವದಿಲ್ಲ ಎನ್ನುವದು ಸರಿಯಲ್ಲ. ದಿನಾಂಕಃ 31/05/2019 ರಂದು ಮಂಜುನಾಥ ಗಣಪಯ್ಯ ಹೆಗಡೆಯವರು ಎಸ್.ಆರ್.ಹೆಗಡೆ ವಕೀಲರ ಕಚೇರಿಗೆ ಬಂದಿದ್ದರು ಅಲ್ಲಿ ಕಚ್ಚಾ ಬರವಣಿಗೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಸ್.ಆರ್.ಹೆಗಡೆಯವರು ಮರಣಶಾಸನ ಟೈಪ ಮಾಡಿಸಿದ್ದಾರೆ ಮತ್ತು ಅದಕ್ಕೆ ನಾನು ಸಹಿ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಸಮಕ್ಷಮ ಮಂಜುನಾಥ ಗಣಪಯ್ಯ ಹೆಗಡೆಯವರು ಸಹಿ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿ ಕೃಷ್ಣಮೂರ್ತಿ ಹೆಗಡೆಯವರು ವ್ಯಾಪಾರದಲ್ಲಿ ನಷ್ಟ ಅನುಭವಿಸಿ ಮನೆಗೆ ಬಂದು ಉಳಿದುಕೊಂಡಿದ್ದಾನೆ ಎನ್ನುವದು ನನಗೆ ಗೊತ್ತಿಲ್ಲ. ಈ ಹಿಂದೆ

ಎರಡನೇ ವಾದಿ ವಿಭಾಗದಲ್ಲಿ ತನ್ನ ಹಿಸ್ಸೆಯ ಬದಲಾಗಿ ಹಣವನ್ನು ಪಡೆದುಕೊಂಡಿದ್ದು ಈಗ ವ್ಯಾಪಾರದಲ್ಲಿ ನಷ್ಟವಾಗಿರುವದರಿಂದ ಮನೆಯಲ್ಲಿ ಪಾಲು ಪಡೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿದ್ದು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 31/05/2019 ರಂದು ಮಂಜುನಾಥ ಗಣಪಯ್ಯ ಹೆಗಡೆಯವರು ಅನಾರೋಗ್ಯದಿಂದ ಓಡಾಡುವ ಸ್ಥಿತಿಯಲ್ಲಿ ಇರಲಿಲ್ಲ ಮತ್ತು ಚಿಕಿತ್ಸೆ ಪಡೆಯುತ್ತಿದ್ದರು ಎನ್ನುವದು ಸರಿಯಲ್ಲ. ಮಂಜುನಾಥ ಗಣಪಯ್ಯ ಹೆಗಡೆಯವರಿಗೆ ಮೃತ ಪಡುವ ಒಂದು ವರ್ಷ ಮೊದಲಿನಿಂದಲೂ ದೈಹಿಕವಾಗಿ ಅನಾರೋಗ್ಯವಾಗಿದ್ದರಿಂದ ಅವರಿಗೆ ಸರಿಯಾಗಿ ಕಣ್ಣು ಕಾಣುತ್ತಿರಲ್ಲಿ ಹಾಗೂ ಸ್ವತಂತ್ರವಾಗಿ ವಿಚಾರ ಮಾಡುವ ಸಾಮರ್ಥ್ಯ ಇರಲಿಲ್ಲ ಎನ್ನುವದು ಸರಿಯಲ್ಲ . 2 ನೇ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಿಶಾನೆ ಪಿ.11 ನ್ನು ನನ್ನ ಸಮಕ್ಷಮ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು, ಶಿರಸಿ.

(ಪೀಠಾಸೀನ ಸಿದ್ದಾಪುರ)